# ಕರ್ನಾಟಕ ಸರ್ಕಾರ
## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು,
ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 22.04.2013

ಸಂಖ್ಯೆ: ಸಚುಆ/ಅ.ಸೂ-2/2013.

### ಅಧಿಸೂಚನೆ

**ವಿಷಯ:** ಸಹಕಾರಿ ಸಂಸ್ಥೆಗಳಿಗೆ ಚುನಾವಣೆ ನಡೆಸುವಿಕೆ-ಸಹಕಾರಿ ಕಾನೂನಿನಲ್ಲಿನ ಅವಕಾಶಗಳು

**ಉಲ್ಲೇಖ:** 1. ಸರ್ಕಾರದ ಅಧಿಸೂಚನೆ: CO-20-CLM-2013, ಬೆಂಗಳೂರು, ದಿನಾಂಕ: 18.3.2013

2. ಸರ್ಕಾರದ ಅಧಿಸೂಚನೆ CO-21-CLM-2013, ಬೆಂಗಳೂರು, ದಿನಾಂಕ: 08.04.2013

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಅಧಿಸೂಚನೆಗಳನ್ನು ಗಮನಿಸಲು ಕೋರಿದೆ. ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸಹಕಾರ ಚುನಾವಣಾ ಆಯೋಗವನ್ನು ರಚನೆ ಮಾಡಿರುವ ವಿಷಯ ಈಗಾಗಲೇ ನಿಮಗೆ ತಿಳಿದಿದೆ. ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಡೆಸಬೇಕಿದ್ದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ರ ರೀತ್ಯಾ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ ಚುನಾವಣೆಯನ್ನು ಕರ್ನಾಟಕ ಸಹಕಾರ ಸಂಘದ ಅಧಿನಿಯಮ 1959, ಪ್ರಕರಣ 39ಎ ರೀತ್ಯಾ ಕೆಳಕಂಡಂತೆ 4 ಹಂತಗಳಲ್ಲಿ ನಡೆಸತಕ್ಕದ್ದಾಗಿರುತ್ತದೆ.

1. ಮೊದಲನೇ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ (Primary Societies) ಆಡಳಿತ ಮಂಡಳಿಗೆ ಚುನಾವಣೆ ನಡೆಸುವಿಕೆ. (30.09.2013ರ ಒಳಗೆ)
2. ಎರಡನೇ ಹಂತದಲ್ಲಿ ದ್ವಿತೀಯ ವರ್ಗದ (Secondary Societies) ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಿಕೆ (31.10.2013ರ ಒಳಗೆ)
3. ಮೂರನೇ ಹಂತದಲ್ಲಿ ಸಂಯುಕ್ತ ಸಹಕಾರ ಸಂಘಗಳಿಗೆ (Federal Socieites) ಚುನಾವಣಾ ನಡವಳಿಯು, ದ್ವಿತೀಯ ವರ್ಗದ ಸಹಕಾರ ಸಂಘದ ಚುನಾವಣೆಗಳು ಪೂರ್ಣಗೊಂಡ 30 ದಿವಸಗಳ ನಂತರ ಪ್ರಾರಂಭವಾಗತಕ್ಕದ್ದಾಗಿರುತ್ತದೆ. (30.11.2013ರ ಒಳಗೆ)
4. ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ (Apex Societies) ಚುನಾವಣೆ ನಡವಳಿಯು, ಸಂಯುಕ್ತ ಸಹಕಾರ ಸಂಘಗಳ ಚುನಾವಣೆಗಳು ಪೂರ್ಣಗೊಂಡ 30 ದಿವಸಗಳ ನಂತರ ಪ್ರಾರಂಭವಾಗತಕ್ಕದ್ದಾಗಿರುತ್ತದೆ. (31.12.2013ರ ಒಳಗೆ)

ಸಹಕಾರ ಚುನಾವಣಾ ಆಯೋಗವು, ಚುನಾವಣೆ ನಡೆಸುವ ಸಂಬಂಧವಾಗಿ ಪ್ರಾರಂಭಿಕ ಕೆಲಸಗಳು ಅಂದರೆ ಮತದಾರರ ಪಟ್ಟಿಯನ್ನು ಸಹಕಾರ ಸಂಘಗಳ ಆಡಳಿತ ಮಂಡಳಿಯ ಅವಧಿಯು ಮುಗಿಯುವ ಕೊನೆಯ 6 ತಿಂಗಳ ಪೂರ್ವದಲ್ಲಿ ತಯಾರಿಸುವಲ್ಲಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಈ ದಿಸೆಯಲ್ಲಿ ಸಂಬಂಧಿಸಿದ ಸಹಕಾರ ಸಂಸ್ಥೆಗಳು / ಸಹಕಾರ ಇಲಾಖಾಧಿಕಾರಿಗಳು ಕಾರ್ಯತತ್ಪರರಾಗಬೇಕಾಗಿರುತ್ತದೆ. ಕಳೆದ ಮಾರ್ಚ್ ಅಂತ್ಯಕ್ಕೆ ಚುನಾವಣೆ ನಡೆಸಲು ಬಾಕಿ ಇದ್ದಂತಹ ಚುನಾವಣೆಗಳನ್ನು ಮುಂದೂಡಲಾಗಿದ್ದು, ಸಂಬಂಧಿಸಿದ ಸಂಘಗಳು ಕರಡು ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಿ ಸದಸ್ಯರಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಅದನ್ನು ಗಮನಿಸಿ, ನಂತರ ತಾತ್ಕಾಲಿಕ ಮತದಾರರ ಪಟ್ಟಿಯನ್ನು ಸಿದ್ದಪಡಿಸುವುದು.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ (20) ರಲ್ಲಿ ಸದಸ್ಯರ ಮತಗಳ (Votes of Members) ಬಗ್ಗೆ ವಿವರಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ (ಸಂಕ್ಷಿಪ್ತವಾಗಿ 'ನಿಯಮ') 13 ರಲ್ಲಿ ಆಡಳಿತ ಮಂಡಳಿ ಸದಸ್ಯರ ಚುನಾವಣೆ ಬಗ್ಗೆ ಹಾಗೂ ನಿಯಮ 13-ಎ ದಲ್ಲಿ ಪ್ರತಿ ಸದಸ್ಯರಿಗೆ ಗುರುತಿನ ಚೀಟಿ ವಿತರಿಸುವ ಬಗ್ಗೆ ವಿವರಿಸಲಾಗಿದೆ. ನಿಯಮ 14 ರಲ್ಲಿ ಆಡಳಿತ ಮಂಡಳಿ ಸದಸ್ಯರ ಚುನಾವಣೆ ಕುರಿತು ಅನುಸರಿಸಬೇಕಾದ ಕ್ರಮದ ಬಗ್ಗೆ ವಿವರಿಸಲಾಗಿದೆ. ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಾಹಕರು ನಿಯಮ 14(3) ರೀತ್ಯಾ ತಾತ್ಕಾಲಿಕ ಮತದಾರರ ಪಟ್ಟಿಯನ್ನು ಚುನಾವಣೆ ನಡೆಯುವ ದಿನಾಂಕಕ್ಕೆ 45 ದಿವಸಗಳ ಮುಂಚಿತವಾಗಿ ತಯಾರಿಸತಕ್ಕದ್ದಾಗಿದೆ. ಮತ್ತು ಇದನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು. ನಿಯಮ 14(4) ರಂತೆ ಸಂಘದ ಸುಸ್ತಿದಾರರ ಪಟ್ಟಿಯನ್ನು ಮತ್ತು ಅರ್ಹತೆಯುಳ್ಳ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿವಸಗಳ

ಮುಂಚಿತವಾಗಿ ಪ್ರಕಟಿಸಬೇಕಾಗಿರುತ್ತದೆ. ನಿಯಮ 14(5) ರಂತೆ, ಸಂಘಕ್ಕೆ ಸುಸ್ತಿದಾರರಾದ ಸದಸ್ಯರಿಗೆ [ಅಧಿನಿಯಮ ಪ್ರಕರಣ 20(2)] ಮತದಾನದ ಹಕ್ಕು ಇರುವುದಿಲ್ಲ. ಸದಸ್ಯರು ಮತವನ್ನು ಚಲಾಯಿಸುವ ಕ್ರಮದ ಬಗ್ಗೆ ಅಧಿನಿಯಮ ಪ್ರಕರಣ 21 ರಲ್ಲಿ ವಿವರಿಸಲಾಗಿದೆ. ಸಹಕಾರ ಸಂಘಗಳ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವ ಸಂಬಂಧ ಸರ್ಕಾರವು ಕ್ರಮ ಕೈಗೊಂಡಿದೆ.

ಸಹಕಾರ ಸಂಘದ ಆಡಳಿತ ಸಮಿತಿ ಸದಸ್ಯರ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ವಿವಾದ ಉಂಟಾದಲ್ಲಿ ಈ ಹಿಂದೆ ಸದರಿ ವಿವಾದಗಳನ್ನು ಚುನಾವಣೆ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ 30 ದಿವಸಗಳ ಒಳಗೆ ಬಾಧಿತರಾದ ವ್ಯಕ್ತಿಗಳು ಸಹಕಾರ ಸಂಘಗಳ ರಿಜಿಸ್ಟ್ರಾರ್ ರವರ ಮುಂದೆ ದಾಖಲಿಸುತ್ತಿದ್ದರು. ಆದರೆ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ರನ್ವಯ, ಅಧಿನಿಯಮ ಪ್ರಕರಣ 70ಕ್ಕೆ ತಿದ್ದುಪಡಿ ಮಾಡಿದ್ದು, ಅದರಂತೆ ಇನ್ನು ಮುಂದೆ ಆಡಳಿತ ಮಂಡಳಿ ಸದಸ್ಯರ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದ ವಿವಾದ / ವ್ಯಾಜ್ಯಗಳನ್ನು ವ್ಯಾಪ್ತಿಯ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸತಕ್ಕದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ಕಾನೂನಿಗೆ ಅನುಗುಣವಾಗಿ ನಡೆಸುವ ಹೊಣೆಗಾರಿಕೆ ಸಹಕಾರ ಇಲಾಖಾಧಿಕಾರಿಗಳು ಹಾಗೂ ಸಹಕಾರ ಸಂಸ್ಥೆಗಳದ್ದಾಗಿರುತ್ತದೆ.

ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಅಧಿನಿಯಮ ಪ್ರಕರಣ 39-ಸಿ ನಲ್ಲಿ ಭ್ರಷ್ಟ ಆಚರಣೆಗಳು (Corrupt Practices) ಬಗ್ಗೆ ವಿವರಿಸಿದೆ ಹಾಗೂ 39-ಎ ದಿಂದ 39-ಕೆ ವರೆಗೆ ಚುನಾವಣೆ ಸಂಬಂಧ ವಿಧಿ-ವಿಧಾನಗಳ ಕುರಿತು ವಿವರಿಸಲಾಗಿದೆ. ಅಧಿನಿಯಮ ಪ್ರಕರಣ 109 ರಲ್ಲಿ ಅಪರಾಧಗಳ ಬಗ್ಗೆ ವಿವರಿಸಿದ್ದು, ಪ್ರಕಣ 111 ರಲ್ಲಿ ಅಪರಾಧಗಳ ಸಂಜ್ಞಾನದ (Cognizance of offences) ವಿವರ ಇರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ರೀತ್ಯಾ ಪ್ರಕರಣ 109ಕ್ಕೆ ಕೆಲವು ಸೇರ್ಪಡೆಯೊಂದಿಗೆ ತಿದ್ದುಪಡಿಯನ್ನು ತರಲಾಗಿದೆ. ಅಧಿನಿಯಮ 109ರ ಉಪ ಪ್ರಕರಣ (20)ರ ಮೇರೆಗೆ ಆಡಳಿತ ಮಂಡಳಿಯ ಯಾವುದೇ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಚುನಾವಣೆಯನ್ನು ನಡೆಸುವ ಸಂಬಂಧ, ನಿಗಧಿತ ಅವಧಿಯೊಳಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗವು ಪ್ರಕರಣ 39-ಎಎ ದಂತೆ ಗೊತ್ತುಪಡಿಸಲಾದ ಅವಧಿಯೊಳಗೆ ಸಲ್ಲಿಸಲು ವಿಫಲವಾದಲ್ಲಿ 6 ತಿಂಗಳ ಕಾರಾವಾಸ ಅಥವಾ ಹತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದಾಗಿದೆ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದಾಗಿದೆ.

ಅಲ್ಲದೇ (21) ಉಪ ಪ್ರಕರಣದಲ್ಲಿ ವಿವರಿಸಿರುವಂತೆ ಯಾವುದೇ ವ್ಯಕ್ತಿ, ಚುನಾವಣೆಗೆ ಮುಂಚೆ, ಚುನಾವಣಾ ಸಮಯದಲ್ಲಿ ಅಥವಾ ಆಡಳಿತ ಮಂಡಳಿ ಸದಸ್ಯರ ಚುನಾವಣೆ ನಂತರ ಅಧಿನಿಯಮ ಪ್ರಕರಣ 39-ಸಿ ದಲ್ಲಿ ವಿವರಿಸಿದಂತೆ ಭ್ರಷ್ಟ ಪದ್ಧತಿ ಅಳವಡಿಸಿಕೊಂಡಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಪ್ರಕರಣ 39-ಕೆ ನಲ್ಲಿ ಪ್ರಸ್ತಾಪಿಸಿದಂತೆ ಯಾವುದೇ ಅಪರಾಧವೆಸಗಿದಲ್ಲಿ 6 ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಹತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದಾಗಿದೆ.

ಸದಸ್ಯರ ಮತದಾರರ ಪಟ್ಟಿ, ಆಡಳಿತ ಮಂಡಳಿ ರಚನೆ, ಪದಾಧಿಕಾರಿಗಳ ವಿವರ ಇತ್ಯಾದಿ ವಿಷಯದ ಬಗ್ಗೆ ಸಂಘದ ಉಪನಿಯಮಗಳಲ್ಲಿ ವಿವರಗಳು ಇರುತ್ತದೆ. ಸಹಕಾರ ಸಂಘಗಳು ಅಧಿನಿಯಮಕ್ಕೆ / ನಿಯಮಕ್ಕೆ ಇತ್ತೀಚಿನವರೆಗೂ ಆಗಿರುವ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವಾಗಿ ಉಪನಿಯಮಗಳಿಗೆ ತಿದ್ದುಪಡಿ ಮಾಡಿಕೊಳ್ಳಬೇಕಾಗಿರುತ್ತದೆ. ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಇಲಾಖಾಧಿಕಾರಿಗಳು ಅಧಿನಿಯಮ, ನಿಯಮ, ಉಪನಿಯಮಗಳ ಅವಕಾಶಗಳ ಬಗ್ಗೆ ಸಮರ್ಪಕ ತಿಳುವಳಿಕೆಯನ್ನು ಹೊಂದಿರಬೇಕಾಗುತ್ತದೆ. ಚುನಾವಣೆ ವಿಷಯವಾಗಿ ಕಾರ್ಯನಿರ್ವಹಿಸುವ ಅಧಿಕಾರಿಗಳು / ನೌಕರರು, ಸಹಕಾರಿ ಅಧಿನಿಯಮ / ನಿಯಮಗಳು ಹಾಗೂ ಸಂಘದ ಉಪನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸತಕ್ಕದ್ದಾಗಿದೆ. ತಪ್ಪಿದಲ್ಲಿ, ಅಧಿನಿಯಮ ಪ್ರಕರಣ 39-ಸಿ ದಿಂದ 39-ಕೆ ಹಾಗೂ ಪ್ರಕರಣ 109ರ ಅಡಿಯಲ್ಲಿ ಚುನಾವಣೆ ಅಪರಾಧ / ಇತರೆ ಅಪರಾಧವೆಸಗಿದಲ್ಲಿ ದಂಡನೆಗೆ ಗುರಿಯಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಚುನಾವಣೆ ವಿಷಯವಾಗಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಕಾನೂನಿಗನುಗುಣವಾಗಿ ಹಾಗೂ ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ನೀಡುವ ನಿರ್ದೇಶನಗಳನ್ವಯ ತಮ್ಮ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ತಿಳಿಸಿದೆ.

ಸಹಿ/-
(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು